ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಎರಡು ನಗರ ಯೋಜನಾ ಇಲಾಖೆಗಳು.

3408(4147) ಶ್ರೀ ರಾಮದಾಸ್ ಎ. (ಕೃಷ್ಣರಾಜಾ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಎರಡೆರಡು ನಗರ ಯೋಜನಾ ಇಲಾಖೆಗಳಿವೆಯೇ?

ಆ) ಹಾಗಿದ್ದಲ್ಲಿ ಎರಡು ನಗರ ಯೋಜನಾ ಕಛೇರಿಗಳು ಒಂದಕ್ಕೊಂದು ಪೈಪೋಟಿಯಂತೆ ಒಂದರ ವ್ಯಾಪ್ತಿಯೊಳಗೆ ಮತ್ತೊಂದು ನುಸುಳಿ ಕ್ರಮವಾದ ಬೆಳವಣಿಗೆಗಿಂತ ಅಕ್ರಮ ಕಟ್ಟಡದವರುಗಳಿಗೆ ಆಸ್ಪದ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಮೈಸೂರು ಮಹಾನಗರಪಾಲಿಕೆಯಲ್ಲಿನ ಇಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಮೈಸೂರು ವಾಣಿವಿಲಾಸ ನೀರು ಸರಬರಾಜು ಇಲಾಖೆಯಲ್ಲಿ ನಡೆದಿರುವ ಹಾಮಗಾರಿ ಅಕ್ರಮಗಳ ಕುರಿತು.

3409 (4116) ಶ್ರೀ ಎ. ರಾಮದಾಸ್ ಕೃಷ್ಣರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ವಾಣಿವಿಲಾಸ ನೀರು ಸರಬರಾಜು ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ನಡೆದಿದೆ ಎನ್ನಲಾದ ಹಾಮಗಾರಿಗಳಲ್ಲಿ ಭಾರಿ ಅಕ್ರಮಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಲಾಗಿದೆಯೇ? ತನಿಖಾಧಿಕಾರಿಗಳು ಯಾರು?